# ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ (ರಿ) ಕೋಲಾರ

(ಸಿದ್ಧ ಪಡಿಸುವಿರುವುದು) ಚೌಡಪ್ಪ.ಎಸ್ ಎಂ.ಎ, ಬಿ.ಪಿ.ಇಡ್

ದೈಹಿಕ ಶಿಕ್ಷಣ ಶಿಕ್ಷರು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಕೋಲಾರ

## ದೈಹಿಕ ಶಿಕ್ಷಣ ಶಿಕ್ಷಕರು ಶಾಲೆಯಲ್ಲಿ ನಿರ್ವಹಿಸಬೇಕಾದ ದಾಖಲೆಗಳು(ಕಡತ/ವಹಿಗಳು)

1) ಕ್ರೀಡಾ ದಾಸ್ತಾನು ವಹಿಪುಸ್ತಕ (Stock Register of sports materials)
2) ಬೇಡಿಕೆ ಪುಸ್ತಕ (Indent Register)
3) ದಿನಚರಿ (Diary)
4) ವಾರ್ಷಿಕ ಕ್ರಿಯಾ ಯೋಜನೆ (Yearly plan)
5) ಪಾಠದ ಟಿಪ್ಪಣಿ (Lesson Plan)
6) ಕ್ರೀಡಾ ಸಾಮಾಗ್ರಿಗಳ ವಿತರಣಾ ವಹಿ (Issue Register of Sports Materials)
7) ಕ್ರೀಡಾ ಸೂಚನಾ (ಜ್ಞಾಪನ) ಪುಸ್ತಕ (Sports Memo Book)
8) ಕ್ರೀಡಾಸಾಧನ ಪುಸ್ತಕ (Competitions Achievement Register)
9) ವಾರ್ಷಿಕ ಅಂದಾಜು ಪತ್ರಿಕೆ (ಕ್ರೀಡಾ ಆಯವ್ಯಯ) (Yearly Budget )
10) ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಹರಾಜು ವಿಲೇವಾರಿ ಕಡತ
11) ದೈಹಿಕ ಶಿಕ್ಷಣ ವೈಯುಕ್ತಿಕ ಅಂಕವಹಿ (Individual Register)
12) ಎ)ದೈಹಿಕ ಸಾಮಾರ್ಥ್ಯ ಅಂಕವಹಿ
    ಬಿ) ರೂಪಣಾತ್ಮಕ & ಸಂಕಲನಾತ್ಮಕ ಅಂಕವಹಿ
    ಸಿ) ಕ್ರೋಢೀಕೃತ ಅಂಕವಹಿ
    ಡಿ) ಚಟುವಟಿಕೆ ಅಂಕವಹಿ ( 10ನೇ ತರಗತಿಗೆ ಮಾತ್ರ)
13) ಕ್ರೀಡಾ ಸಂಘ (Sports Club)
14) ವೈದ್ಯಕೀಯ ತಪಾಸಣಾ ವಹಿ (ಆರೋಗ್ಯ ಕಾರ್ಡ್) (Health Cards)
15) ವಿದ್ಯಾರ್ಥಿಗಳಿಗೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ವಿತರಣಾ ಕಡತ
16) ಸರ್ಕಾರದ ಸುತ್ತೋಲೆಗಳ ಕಡತ (Government order Files)
17) ಗುಂಪು ರಚನಾ ಪುಸ್ತಕ (House formation Register)
18) ಅನುಪಾಲನಾ ಪುಸ್ತಕ (Follow up Register)
19) ಕ್ರೀಡಾ ಸಾಮಾಗ್ರಿಗಳ ಖರೀದಿ/ಕ್ರೀಡಾಂಗಣ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನ ಬಳಕೆ ಕಡತ
20) ಇಂಟ್ರಾಮುರಲ್ಸ್ ಮತ್ತು ಎಕ್ಸ್ಟ್ರಾಮುರಲ್ಸ್ ಪುಸ್ತಕ (Match Register)
21) ಕ್ರೀಡಾ ಸಾಮಾಗ್ರಿಗಳ ಖರೀದಿಯ ತುಲನಾತ್ಮಕ ದರಪಟ್ಟಿ ಕಡತ

## ಕ್ರೀಡಾ ದಾಸ್ತಾನು ಪುಸ್ತಕ/ Stock Register of Sports Materials

ಇದು ಇಲಾಖೆಯಿಂದ ನಿಗಧಿಪಡಿಸಿದ ದಾಸ್ತಾನು ಪುಸ್ತಕವಾಗಿದ್ದು, ಈಗಾಗಲೇ ಶಾಲೆಯಲ್ಲಿ ಬಳಸುತ್ತಿರುವ ದಾಸ್ತಾನು ಪುಸ್ತಕವು ಭಿನ್ನವಾಗಿದ್ದರೆ ಅದನ್ನು ಅಲ್ಲಿಗೆಯೇ ಮುಕ್ತಾಯಗೊಳಿಸಿ ಹೊಸದನ್ನು ಪ್ರಾರಂಭಿಸುವುದು. ಇದಕ್ಕಾಗಿ ಹಳೆಯ ದಾಸ್ತಾನು ಪುಸ್ತಕದ ಕೊನೆಯಲಿ ಪ್ರಮಾಣಿಕರೀಸಬೇಕು.

### ಪ್ರಮಾಣ ಪತ್ರ

ಇಲಾಖೆಯಿಂದ ಗೊತ್ತುಪಡಿಸಿದ ಹೊಸದಾದ ಕ್ರೀಡಾ ದಾಸ್ತಾನು ಪುಸ್ತಕವನ್ನು ಪ್ರಾರಂಭಿಸಲು ಮೇಲಾಧಿಕಾರಿಗಳು ಸಲಹೆ ನೀಡಿದ್ದರಿಂದ ಪ್ರಸ್ತುತ ಬಳಸುತ್ತಿರುವ ಕ್ರೀಡಾ ದಾಸ್ತಾನು ಪುಸ್ತಕವನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ. ಈ ಪುಸ್ತಕವು ಕೈಯಿಂದ ಬರೆದ/ಮಶಿನ್‌ನಿಂದ ಹಾಕಿದ/ಮುದ್ರಿತ ೧ರಿಂದ ಪುಟಗಳನ್ನು ಹೊಂದಿರುವುದಗಿ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದೈಹಿಕ ಶಿಕ್ಷಣ ಶಿಕ್ಷಕರ ಸಹಿ — ಮುಖ್ಯಶಿಕ್ಷಕರು/ ಉಪಪ್ರಾಂಶುಪಾಲರ ಸಹಿ

## ಹೊಸದಾಸ್ತಾನು ಪುಸ್ತಕ

## ಪ್ರಮಾಣ ಪತ್ರ

ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಮೇಲಾಧಿಕಾರಿಗಳ ಸಲಹೆ ಮೇರೆಗೆ ಇಲಾಖೆಯಿಂದ ನಿಗಧಿಪಡಿಸಿದ ಕ್ರೀಡಾ ದಾಸ್ತಾನು ಪುಸ್ತಕವನ್ನು ದಿನಾಂಕ: / / ರಿಂದ ಹೊಸದಾಗಿ ಪ್ರಾರಂಭಿಸಲಾಗುತ್ತಿದ್ದು ಇದು ಕೈಯಿಂದ ಬರೆದ/ಮಶಿನ್‌ನಿಂದ ಹಾಕಿದ/ಮುದ್ರಿತ ೧ರಿಂದ ಪುಟಗಳನ್ನು ಹೊಂದಿರುವುದಾಗಿ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದೈಹಿಕ ಶಿಕ್ಷಣ ಶಿಕ್ಷಕರ ಸಹಿ — ಮುಖ್ಯಶಿಕ್ಷಕರು/ ಉಪಪ್ರಾಂಶುಪಾಲರ ಸಹಿ

**ಪರಿವಿಡಿ**

| ಕ್ರ.ಸಂ. | ಕ್ರೀಡಾ ಸಾಮಾಗ್ರಿಗಳ ಹೆಸರು | ಪುಟ ಸಂಖ್ಯೆ |
|---|---|---|
| 1 | ವಾಲಿಬಾಲ್ | 1 ಮತ್ತು 2 |
| 2 | ವಾಲಿಬಾಲ್ ನೆಟ್ | 3 |
| 3 | ಡಂಬೆಲ್ಸ್ | 4 |
| 4 | ಲೇಝಿಮ್ | 5 |
|  | ಇತ್ಯಾದಿ |  |

# ಕ್ರೀಡಾ ದಾಸ್ತಾನು ಪುಸ್ತಕ SPORTS STOCK REGISTER

| Sl No. | Date of Entry | Name of the Firm | Invoice No. & Date | Rate per Article | No. Purchased | Total Amt | Total Material Position | | | Stock as on 31st March | | | Total | Signature of the Sports Secretary | Signature of the H M | Remarks |
|---|---|---|---|---|---|---|---|---|---|---|---|---|---|---|---|---|
| | | | | | | | New | Serviceable | Unserviceable | New | Serviceable | Unserviceable | | | | |
| ಕ್ರ. ಸಂ. | ದಿನಾಂಕ | ಯಾರಿದಂದ ಖರೀದಿಸಿದ್ದು | ರಶೀದಿ ಸಂ. & ದಿನಾಂಕ | ದರ ಒಂದಕ್ಕೆ | ಒಟ್ಟು ಖರೀದಿಸಿದ ಸಂಖ್ಯೆ | ಒಟ್ಟು ಮೊತ್ತ | ಶಾಲಾಯಲ್ಲಿರುವ ಒಟ್ಟು ಸಾಮಾಗ್ರಿಗಳು | | | ಒಟ್ಟು ಸಾಮಾಗ್ರಿಗಳು ಮಾರ್ಚ್ 31ಕ್ಕೆ | | | ಒಟ್ಟು | ಕ್ರೀಡಾ ಕಾರ್ಯದರ್ಶಿಯ ಸಹಿ | ಮುಖ್ಯಶಿಕ್ಷಕರ ಸಹಿ | ಷರಾ |
| | | | | | | | ಹೊಸದು | ಉಪಯುಕ್ತ | ಅನುಪಯುಕ್ತ | ಹೊಸದು | ಉಪಯುಕ್ತ | ಅನುಪಯುಕ್ತ | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | | 14 | 15 | 16 |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |

# ಕ್ರೀಡಾ ದಾಸ್ತಾನು ಪುಸ್ತಕ ತುಂಬುವ ಮಾದರಿ

ಕ್ರೀಡಾ ಸಾಮಾಗ್ರಿ ಹೆಸರು: ವಾಲಿಬಾಲ್

| Sl No. | Date of Entry | Name of the Firm | Invoice No. & Date | Rate per Article | No. Purchased | Total Amt | Total Material Position | | | Stock as on 31st March | | | Total | Signature of the Sports Secretary | Signature of the H M | Remarks |
|---|---|---|---|---|---|---|---|---|---|---|---|---|---|---|---|---|
| | | | | | | | New | Serviceable | Unserviceable | New | Serviceable | Unserviceable | | | | |
| ಕ್ರ. ಸಂ. | ದಿನಾಂಕ | ಯಾರಿದಂದ ಖರೀದಿಸಿದ್ದು | ರಶೀದಿ ಸಂ. & ದಿನಾಂಕ | ದರ ಒಂದಕ್ಕೆ | ಒಟ್ಟು ಖರೀದಿಸಿದ ಸಂಖ್ಯೆ | ಒಟ್ಟು ಮೊತ್ತ | ಶಾಲಾಯಲ್ಲಿರುವ ಒಟ್ಟು ಸಾಮಾಗ್ರಿಗಳು | | | ಒಟ್ಟು ಸಾಮಾಗ್ರಿಗಳು ಮಾರ್ಚ್ 31ಕ್ಕೆ | | | ಒಟ್ಟು | ಕ್ರೀಡಾ ಕಾರ್ಯದರ್ಶಿಯ ಸಹಿ | ಮುಖ್ಯಶಿಕ್ಷಕರ ಸಹಿ | ಷರಾ |
| | | | | | | | ಹೊಸದು | ಉಪಯುಕ್ತ | ಅನುಪಯುಕ್ತ | ಹೊಸದು | ಉಪಯುಕ್ತ | ಅನುಪಯುಕ್ತ | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | | 14 | 15 | 16 |
| 1 | 1.6.14 | ಹಿಂದಿನ ಪುಸ್ತಕದಿಂದ | – | – | – | – | 2 | 4 | 12 | 2 | 2 | 14 | 18 | – | | |
| 2 | 15.6.14 | ದಾನಿಗಳಿಂದ ದೇಣಿಗೆ | – | – | 5 | – | 7 | 2 | 14 | 5 | 4 | 14 | 23 | – | | |
| 3 | 18.3.15 | ಈ ಜೋನ್ ಸ್ಪೋರ್ಟ್, ಕೋಲಾರ | 1415 17.3.15 | 475 | 5 | 2375 | 10 | 4 | 14 | 6 | 5 | 17 | 28 | | | |

**ಸೂಚನೆಗಳು: ಸಲಹೆಗಳು:**

1. ಹಳೆಯ ಕ್ರೀಡಾ ದಾಸ್ತಾನು ಪುಸ್ತಕ ಮುಗಿದ ಮೇಲೆ ಹೊಸದಾದ ಕ್ರೀಡಾ ದಾಸ್ತಾನು ಪುಸ್ತಕಕ್ಕೆ 2 ಎಂದು ಸಂಖ್ಯೆಯನ್ನು ಕೊಡಬೇಕು.
2. ಪರಿವಿಡಿಯಲ್ಲಿ ತೋರಿಸಿದಂತೆ ಒಂದು ಪುಟದಲ್ಲಿ ಒಂದೇ ಕ್ರೀಡಾ ಸಾಮಾಗ್ರಿ ಹೆಸರನ್ನು ಬರೆಯಬೇಕು.
3. ಮೇಲಿನ ಉದಾಹರಣೆಯಲ್ಲಿ ಕಾಣಿಸಿದಂತೆ 12,13,14 ಕಾಲಂಗಳನ್ನು ವರ್ಷದ ಕೊನೆಗೆ ಅಂದರೆ ಮಾರ್ಚ್ 31ಕ್ಕೆ ಭರ್ತಿ ಮಾಡಲು ಮರೆಯಬಾರದು.
4. ಕಾಲಂ 9,10,11ಗಳನ್ನು ಕೂಡಿಸಿದಾಗ ಬರುವ ಮೊತ್ತವು ಕಾಲಂ 12,13,14ಗಳನ್ನು ಕೂಡಿಸಿದಾಗ ಬರುವ ಮೊತ್ತಕ್ಕೆ ಸಮವಾಗಿರಬೇಕು.
5. ಪ್ರಥಮ ಹಾಳೆಯಲ್ಲಿ ಪ್ರಮಾಣಪತ್ರ, ನಂತರ ಪರಿವಿಡಿಗೆ, ನಂತರ ಕ್ರೀಡಾಸಾಮಾಗ್ರಿಗಳ ದಾಸ್ತಾನು, ವಾರ್ಷಿಕ ಪರಿಶೀಲನೆ, ನಂತರ ಪರಿಶೀಲನಾಧಿಕಾರಿಗಳ ಷರಾ, ಹಸ್ತಾಂತರ, ಮುಖ್ಯಸ್ಥರ ಷರಾ

-------------ಶೈಕ್ಷಣಿಕ ವರ್ಷಕ್ಕಾಗಿ ಮಾರ್ಚ್ 31ರಂದು ಕ್ರೀಡಾ ದಾಸ್ತಾನು ಪುಸ್ತಕದ ಪುಟ ಸಂಖ್ಯೆ---
------ರಿಂದ ----------ರವರೆಗೆ ಎಲ್ಲಾ ಕ್ರೀಡಾ ಸಾಮಾಗ್ರಿಗಳನ್ನು ಪರಿಶೀಲಿಸಲಾಯಿತು ಮತ್ತು ಸರಿಯಾಗಿವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪರಿಶೀಲನಾಧಿಕಾರಿಗಳ ಸಹಿ

ಇಲ್ಲಿಂದ ಮತ್ತೆ 8–10 ಪುಟಗಳನ್ನು ಬಿಟ್ಟು ನಂತರ,

ಪರಿಶೀಲನಾಧಿಕಾರಿಗಳ ಷರಾ

-----------------------------------------------------------

----------------------------------------------------------

ಅಧಿಕಾರಿಗಳ ಸಹಿ

ಇಲ್ಲಿಂದ ಮತ್ತೆ 8–10 ಪುಟಗಳನ್ನು ಬಿಟ್ಟು ನಂತರ,

ದೈಹಿಕ ಶಿಕ್ಷಣ ಶಿಕ್ಷಕರು/ಮುಖ್ಯಸ್ಥರು ಬೇರೆಯವರಿಗೆ ಚಾರ್ಜನ್ನು ಹ್ಯಾಂಡ್ ಓವರ್ ಮಾಡುವುದಕ್ಕಾಗಿ 10 ಪುಟಗಳಷ್ಟು ಬಿಡುವುದು

-------------------------------------------------------

ಚಾರ್ಜ್ ಪಡೆಯುವವರ ಸಹಿ ಚಾರ್ಜ್ ಕೊಡುವವರ ಸಹಿ

ಮುಖ್ಯ ಶಿಕ್ಷಕರ ಸಹಿ

## *ವಾರ್ಷಿಕ ಪರಿಶೀಲನೆ ವಿವರ (ಕಾಲಂ)*

***ಪ್ರತಿವರ್ಷ ಮಾರ್ಚ್ 31ರ ಒಳಗೆ ವಾರ್ಷಿಕ ಪರಿಶೀಲನೆಯನ್ನು ಮಾಡಬೇಕು.***

---------------ವರ್ಷದ ಕ್ರೀಡಾ ಸಾಮಾಗ್ರಿಗಳು

ಶಾಲೆಯ ಹೆಸರು ದಿನಾಂಕ

| **ಕ್ರ.ಸಂ.** | **ಕ್ರೀಡಾ ಉಪಕರಣಗಳ ಹೆಸರು** | **ಪರಿವಿಡಿಯಲ್ಲಿ ಬರೆದ ಕ್ರ.ಸಂ.** | **ಪುಟದ ಸಂಖ್ಯೆ** | **ಉಪಕರಣಗಳ ವಸ್ತು ಸ್ಥಿತಿ,** | | | **ಒಟ್ಟು** | **ಷರಾ** |
|---|---|---|---|---|---|---|---|---|
| | | | | **ಉಪಯುಕ್ತ** | | **ಅನುಪಯುಕ್ತ** | | |
| | | | | **ಹೊಸದು** | **ಹಳೆಯದು** | | | |
| | | | | | | | | |

ಶಿಕ್ಷಕರ ಸಹಿ ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯೋಪಾಧ್ಯಾಯರ ಸಹಿ

## *ಕ್ರೀಡಾ ದಾಸ್ತಾನು ಹಸ್ತಾಂತರಕ್ಕೆ*

### ಕ್ರೀಡಾ ಸಾಮಾಗ್ರಿಗಳ ಕ್ರೋಢೀಕೃತ ಪಟ್ಟಿ

ವರ್ಗಾವಣೆ ಅಥವಾ ಬೇರೆಯವರಿಗೆ ಕ್ರೀಡಾ ದಾಸ್ತಾನು ಹಸ್ತಾಂತರ ಮಾಡಬೇಕಾದರೆ ಅಥವಾ ಕ್ರೀಡಾ ದಾಸ್ತಾನು ವಹಿಸಬೇಕಾದರೆ ಈ ಕೆಳಕಂಡಂತೆ ಪಟ್ಟಿ ತಯಾರಿಸಿ ನೀಡುವುದು ಅಥವಾ ಪಡೆಯಬೇಕು.

| ಶಾಲೆಯ ಹೆಸರು | | | | | | ದಿನಾಂಕ | | |
|---|---|---|---|---|---|---|---|---|
| ಕ್ರ.ಸಂ. | ಕ್ರೀಡಾ ಉಪಕರಣಗಳ ಹೆಸರು | ಪರಿವಿಡಿಯಲ್ಲಿ ಬರೆದ ಕ್ರ.ಸಂ. | ಪುಟದ ಸಂಖ್ಯೆ | ಉಪಕರಣಗಳ ವಸ್ತುಸ್ಥಿತಿ | | ಅನುಪಯುಕ್ತ | ಒಟ್ಟು | ಷರಾ |
| | | | | ಉಪಯುಕ್ತ | | | | |
| | | | | ಹೊಸದು | ಹಳೆಯದು | | | |
| | | | | | | | | |

ಚಾರ್ಜ್ ಪಡೆಯುವವರ ಸಹಿ ಚಾರ್ಜ್ ಕೊಡುವವರ ಸಹಿ

ಮುಖ್ಯ ಶಿಕ್ಷಕರ ಸಹಿ

# ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ.

ಶಾಲೆಗಳಲ್ಲಿ ಮಕ್ಕಳಿಗೆ ಆಟವಾಡಲು ಹಾಗೂ ಕಲಿಸುವುದಕ್ಕೆ ಹೆಚ್ಚಿನ ರೀತಿ ಕ್ರೀಡಾ ಸಾಮಾಗ್ರಿಗಳನ್ನು ಬಳಸುವುದರಿಂದ ಅವುಗಳು ಅನುಪಯುಕ್ತವಾಗುತ್ತವೆ. ಈ ರೀತಿ ಅನುಪಯುಕ್ತ ಆದ ಕ್ರೀಡಾ ಸಾಮಾಗ್ರಿಗಳನ್ನು ಇಲಾಖೆಯ ನಿಯಮಾನುಸಾರ ವಿಲೇವಾರಿ ಮಾಡಿದರೆ ಕ್ರೀಡಾ ದಾಸ್ತಾನುವಹಿ ಅಚ್ಚುಕಟ್ಟಾಗಿರುತ್ತದೆ. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ ಮಾಡಲು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು.

1. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನುನಿಯಮಾನುಸಾರ ಪಟ್ಟಿ ಮಾಡಬೇಕು. ಇಲ್ಲಿ ಒಂದೇ ವಸ್ತು ಅನುಪಯುಕ್ತವಾಗಿದ್ದರೂ ಬೇರೆ ಬೇರೆ ವರ್ಷ ಅಥವಾ ದಿನಾಂಕಗಳಲ್ಲಿ ಖರೀದಿಸಿದರೆ ಪ್ರತ್ಯೇಕವಾಗಿ ಪಟ್ಟಿಯಲ್ಲಿ ಬರೆಯಬೇಕು. ಮುಂದೆ ಮಾದರಿ ನೀಡಲಾಗಿದೆ.
2. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ ಮಾಡಲು ಪಟ್ಟಿ ತಯಾರಿಸಿದ ನಂತರ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಸಹಿಯನ್ನು ಮಾಡಬೇಕು.
3. ಅನುಮತಿ ಪತ್ರವನ್ನು ಬರೆದು ಪತ್ರದ ಜೊತೆ ಪಟ್ಟಿಯನ್ನು ಲಗತ್ತಿಸಿ ಯಾರಿಗೆ ಕಳುಹಿಸಬೇಕೋ ಅವರಲ್ಲಿ ನೀಡಿ ನಕಲಿ ಪ್ರತಿಯನ್ನು ಪಡೆದು ವಹಿಯಲ್ಲಿ ಇಡಬೇಕು.
4. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಒಟ್ಟು ಮೌಲ್ಯವು ಈ ಕೆಳಕಂಡಂತೆ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.

ಎ) 5000ರೂಗಿಂತ ಕಡಿಮೆ ಇದ್ದರೆ ಎಸ್.ಡಿ.ಎಂ.ಸಿ. ಅಧ್ಯಕ್ಷರಿಂದ ಅನುಮತಿ ಪಡೆಯಬೇಕು.

ಬಿ) 15000 ರೂ.ಗಿಂತ ಕಡಿಮೆ ಇದ್ದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ

ಸಿ) 25000 ರೂ.ಗಿಂತ ಕಡಿಮೆ ಇದ್ದರೆ ಉಪನಿರ್ದೇಶಕರಿಂದ ಅನುಮತಿ

ಡಿ) 25000 ರೂ. ಮೇಲ್ಪಟ್ಟು ಇದ್ದರೆ ಆಯುಕ್ತರಿಗೆ.

5. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಪಟ್ಟಿಯನ್ನು ಕಳುಹಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳು ಬಂದು ಪರಿಶೀಲಿಸಿ ಅನುಮತಿ ಪತ್ರ ನೀಡಿದ ನಂತರ ಹರಾಜು ಮಾಡಬೇಕು.

**ಸೂಚನೆ:** ಅಧಿಕಾರಿಗಳು ಈ ಕೆಳಕಂಡ ದಾಖಲೆಗಳನ್ನು ಪರಿಶೀಲಿಸುವರು.

ಎ) ಕ್ರೀಡಾ ಸಾಮಾಗ್ರಿಗಳ ವಿತರಣಾ ವಹಿ

ಬಿ) ಕ್ರೀಡಾ ದಾಸ್ತಾನು ವಹಿ

ಆದ್ದರಿಂದ ಇವುಗಳ ನಿರ್ವಹಣೆ ಸಮರ್ಪಕವಾಗಿರಬೇಕು ಹಾಗೂ ಕ್ರೀಡಾ ಸಾಮಾಗ್ರಿಗಳು ವಿತರಣೆಯಾಗಿರಬೇಕು.

6. ಅಧಿಕಾರಿಗಳಿಂದ ಅನುಮತಿ ಪತ್ರ ಬಂದ ಮೇಲೆ ಹರಾಜು ಮಾಡುವ ಕ್ರೀಡಾ ಸಾಮಾಗ್ರಿಗಳು ಮತ್ತು ದಿನಾಂಕ ಸಮಯವನ್ನು ನಮೂದಿಸಿ ಪ್ರಕಟಿಸಬೇಕು. (ಪತ್ರಿಕೆಗಳ/ಸೂಚನಾ ಫಲಕಗಳು/ಕರಪತ್ರಗಳು)

7. ಹರಾಜು ಸಂದರ್ಭದಲ್ಲಿ ಕೆಲವು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಅವುಗಳನ್ನು ಮುಂದಿನ ಪಟ್ಟಿಯಲ್ಲಿ ತಿಳಿಸಲಾಗುವುದು.

8. ಹರಾಜಿನಿಂದ ಬಂದ ಹಣವನ್ನು ಪ್ರಸ್ತುತ/ಸಂಚಿತ ಕ್ರೀಡಾನಿಧಿಗೆ ಒಂದು ದಿನದ ಒಳಗಾಗಿ ಕಟ್ಟಬೇಕು. ಹಾಗೂ ರಶೀದಿಯನ್ನು ಕಡತಕ್ಕೆ ಹಾಕಬೇಕು.

9. ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿಗೆ ಸಂಬಂಧಿಸಿ ಎಲ್ಲಾ ಪತ್ರ ವ್ಯವಹಾರಗಳು ಕಡತಗೊಳಿಸಿ ಮೇಲ್ವಿಚಾರಣೆಗೆ ಬಂದ ಸಂದರ್ಭದಲ್ಲಿ ಹಾಜರುಪಡಿಸಬೇಕು.

10. ಹರಾಜು ಹಾಕಿದ ಕ್ರೀಡಾ ಸಾಮಾಗ್ರಿಗಳನ್ನು ದಾಸ್ತಾನು ವಹಿಯಲ್ಲಿ ಕ್ರೀಡಾ ಸಾಮಾಗ್ರಿಯ ಬಳಿ ಉಪನಿರ್ದೇಶಕರ ಪತ್ರ ಸಂಖ್ಯೆ ಮತ್ತು ದಿನಾಂಕ ಬರೆದು ದಾಸ್ತಾನು ವಹಿಯಿಂದ ಕೈಬಿಡಬೇಕು. ನಂತರ ಮುಖ್ಯ ಶಿಕ್ಷಕರ ಸಹಿಯನ್ನು ಮಾಡಿಸಬೇಕು.

11. ಪ್ರತಿ ವರ್ಷ ಮಾರ್ಚ್ 31ರ ಒಳಗೆ ಪ್ರಕ್ರಿಯೆ ಮುಗಿದಿರಬೇಕು.

*ಸಿದ್ಧ ಪಡಿಸುವಿರುವುದು)* ***ಚೌಡಪ್ಪ.ಎಸ್*** ಎಂ.ಎ, ಬಿ.ಪಿ.ಇಡ್ ದೈಹಿಕ ಶಿಕ್ಷಣ ಶಿಕ್ಷರು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಕೋಲಾರ

## ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನು ಪಟ್ಟಿ ಮಾಡುವ ಕ್ರಮ

**ಶಾಲೆಯ ಹೆಸರು:-**

| ಕ್ರ. ಸಂ. | ಅನುಪಯುಕ್ತ ಉಪಕರಣಗಳ ಹೆಸರು | ದಾಸ್ತಾನು ವಹಿ ಪುಟ ಸಂಖ್ಯೆ | ಖರೀದಿಸಿದ ದಿನಾಂಕ | ಅನುಪಯುಕ್ತ ಸಂಖ್ಯೆ | ದರ | ಒಟ್ಟು | ಷರಾ |
|---|---|---|---|---|---|---|---|
| 1 | ಅಳತೆ ಪಟ್ಟಿ | 02ರಿಂದ 03 | 22/2/2004 | 01 | 295 | 295 | – |
| 2 | ವಾಲಿಬಾಲ್ | 15---16 | 15/11/2008 | 03 | 150 | 450 | |
| 3 | ವಾಲಿಬಾಲ್ | 15---16 | 18/03/2008 | 02 | 200 | 400 | |
| 4 | ವಿಜ್ಜಲ್ | 9---10 | 28/03/2008 | 02 | 20 | 40 | |
| 5 | ಹ್ಯಾಮರ್ | 25---26 | 30/03/2003 | 02 | 220 | 440 | |
| | ಹೀಗೆ ಮುಂದುವರೆಸುವುದು. | | | | | | |

(ಒಟ್ಟು ಹಣ---------------ರೂ---------ಪೈಸೆ ಮಾತ್ರ)

ದೈಹಿಕ ಶಿಕ್ಷಣ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

**ಉದಾಹರಣೆಗಾಗಿ**

ಶಾಲೆ ಹೆಸರು

ಪತ್ರ ಸಂಖ್ಯೆ: 10/ದೈ.ಶಿ.ಅ.ವ.ವಿ/2015-16 ದಿನಾಂಕ-------------

ರವರಿಗೆ,
ಶ್ರೀ ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ
------------ಜಿಲ್ಲೆ.
ಮಾನ್ಯರೇ,

ವಿಷಯ: ಅನುಪಯುಕ್ತ ಕ್ರೀಡಾ ಉಪಕರಣಗಳನ್ನು ಕ್ರೀಡಾ ದಾಸ್ತಾನು ವಹಿಯಿಂದ ಕೈಬಿಡಲು ಹಾಗೂ ಲಿಲಾವು (ಹರಾಜು) ಮಾಡಲು ಅನುಮತಿ ಪಡೆಯುವುದರ ಬಗ್ಗೆ.

* * * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, --------ಶಾಲೆ / ----------ಸರ್ಕಾರಿ ಪದವಿ ಪೂರ್ವ ಕಾಲೇಜು--------------- ಕ್ರೀಡಾ ದಾಸ್ತಾನು ವಹಿಯಲ್ಲಿ ಸುಮಾರು ವರ್ಷದಿಂದ ಉಪಯೋಗಕ್ಕೆ ಬಾರದ ಹಾಗೂ ಶಿಥಿಲಗೊಂಡಿರುವ ಉಪಕರಣಗಳಿದ್ದು, ಈ ಉಪಕರಣಗಳನ್ನು ಕ್ರೀಡಾ ದಾಸ್ತಾನು ವಹಿಯಿಂದ ಕೈಬಿಡಲು ಹಾಗೂ ಅವುಗಳನ್ನು ಹರಾಜು ಹಾಕಿ ಬಂದ ಹಣವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಲು ತಾವು ಅನುಮತಿ ನೀಡಬೇಕೆಂದು ಕೋರಿದೆ.

ಅನುಪಯುಕ್ತ ಕ್ರೀಡಾ ಉಪಕರಣಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.
ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

ಮುಖ್ಯ ಶಿಕ್ಷಕರ ಸಹಿ

# ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಪಟ್ಟಿ

ಶಾಲೆಯ ಹೆಸರು:

| ಕ್ರ. ಸಂ. | ಅನುಪಯುಕ್ತ ಉಪಕರಣಗಳ ಹೆಸರು | ದಾಸ್ತಾನು ವಹಿ ಪುಟ ಸಂಖ್ಯೆ | ಖರೀದಿಸಿದ ದಿನಾಂಕ | ಅನುಪಯುಕ್ತ ಸಂಖ್ಯೆ | ದರ | ಒಟ್ಟು ಹಣ | ಷರಾ |
|---|---|---|---|---|---|---|---|
| 1 | ಥ್ರೋಬಾಲ್ | 8ರಿಂದ 10 | 28/3/2006 | 02 | 33=00 | 660=00 | |
| 2 | ಅಳತೆ ಪಟ್ಟಿ | 2ರಿಂದ 3 | 25/3/2007 | 01 | ಇಲ್ಲಿ ಖರೀದಿಸಿದ ಅ ವಸ್ತುವಿನ ದರ ನಮೂದಿಸಿ | ಇಲ್ಲಿ ಪ್ರತಿಯೊಂದು ವಸ್ತುವಿನ ಒಟ್ಟು ದರ ನಮೂದಿಸಿ | |
| 3 | ಥ್ರೋ ಬಾಲ್ ನೆಟ್ | 10ರಿಂದ 11 | 28/3/2006 | 01 | | | |
| 4 | ಥ್ರೋ ಬಾಲ್ ನೆಟ್ | 10ರಿಂದ 11 | 22/2/2007 | 01 | | | |
| 5 | ಬಾಸ್ಕೆಟ್ ಬಾಲ್ | 14 ರಿಂದ 16 | 28/3/2006 | 02 | | | |
| 6 | ವಾಲಿಬಾಲ್‌ನೆಟ್ | 20ರಿಂದ 22 | 28/3/2006 | 01 | | | |
| 7 | ವಾಲಿಬಾಲ್‌ನೆಟ್ | 20ರಿಂದ 22 | 25/3/2006 | 01 | | | |
| 8 | ಪುಟ್‌ಬಾಲ್ | 28ರಿಂದ 30 | 23/2/2009 | 03 | | | |
| 9 | ಪುಟ್‌ಬಾಲ್ | 28ರಿಂದ 30 | 24/3/2009 | 01 | | | |
| 10 | ಕ್ರಿಕೆಟ್ ಸ್ಟಂಪ್ಸ್ | 40ರಿಂದ 41 | 22/3/2005 | 05 | | | |
| 11 | ಆಂಕ್ಲೇಟ್ಸ್ | 49ರಿಂದ 50 | 28/3/2001 | 06 | | | |
| 12 | ಆಂಕ್ಲೇಟ್ಸ್ | 49ರಿಂದ 30 | 26/3/2004 | 03 | | | |
| 13 | ನೀಕ್ಯಾಪ್ಸ್ | 51ರಿಂದ 52 | 25/2/2002 | 02 | | | |
| 14 | ನೀಕ್ಯಾಪ್ಸ್ | 51 52 | 27/3/2008 | 04 | | | |
| 15 | ವೀಸಲ್ | 102ರಿಂದ103 | 24/2/199*8 | 06 | | | |
| 16 | ಕ್ರಿಕೆಟ್ ಲೆದರ್ ಬಾಲ್ಸ್ | 42ರಿಂದ 43 | 26/2/2010 | 08 | | | |
| 17 | ಹ್ಯಾಮರ್ | 5ರಿಂದ 6 | 29/3/2003 | 01 | | | |
| 18 | ಹ್ಯಾಮರ್ | 5ರಿಂದ 6 | 25/2/2005 | 01 | | | |
| | ಒಟ್ಟು | | | | | 21840–00 | |

( ಒಟ್ಟು ಹಣ ಇಪತ್ತೊಂದು ಸಾವಿರದ ಎಂಟನೂರು ನಲವತ್ತು ರೂ ಮಾತ್ರ)

**ದೃಢೀಕರಣ**

1. ಈ ಪಟ್ಟಿಯಲ್ಲಿರುವ ಕ್ರೀಡಾ ಉಪಕರಣಗಳನ್ನು ಈ ಹಿಂದಿನ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.
2. ಪಟ್ಟಿಯಲ್ಲಿರುವ ಎಲ್ಲಾ ಉಪಕರಣಗಳನ್ನು ಇವುಗಳ ಯೋಗ್ಯ ಉಪಯೋಗದಿಂದ ಅನುಪಯುಕ್ತವಾಗಿರುತ್ತದೆ.
3. ತಮ್ಮಿಂದ ಅನುಮತಿ ಬಂದ ತಕ್ಷಣ ಇಲಾಖಾ ನಿಯಮಾನುಸಾರ ಕ್ರೀಡೋಪಕರಣಗಳನ್ನು ಲೀಲಾವು (ಹರಾಜು) ಮಾಡಲಾಗುವುದು. ಹಾಗೂ ಹರಾಜಿನಿಂದ ಬಂದ ಹಣವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು.

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿಗಳು

ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ಅನುಪಯುಕ್ತ ಕ್ರೀಡಾ ಸಾಮಗ್ರಿಗಳ ಹರಾಜು ದರಪಟ್ಟಿ ವಿವರ

**ಶಾಲೆಯ ಹೆಸರು---------------** **ದಿನಾಂಕ:------------**

| ಕ್ರ. ಸಂ | ಅನುಪಯುಕ್ತ ಕ್ರೀಡಾ ಸಾಮಾಗ್ರಿಯ ಹೆಸರು | ಕ್ರೀಡಾ ಸಾಮಗ್ರಿಯ ಸಂಖ್ಯೆ | ಹರಾಜುದಾರರ ಕರೆದ ಹಣ | | | ಅತಿ ಹೆಚ್ಚು ಕರೆದ ಹಣ | ವಸ್ತು ಪಡೆದವರ ಹೆಸರು | ಸಹಿ | ಷರಾ ನಗದು/ಚೆಕ್ (ಸಂಖ್ಯೆ) |
|---|---|---|---|---|---|---|---|---|---|
| | | | ಪ್ರಥಮ ಹರಾಜುದಾರ | ದ್ವಿತೀಯ ಹರಾಜುದಾರ | ತೃತೀಯ ಹರಾಜುದಾರ | | | | |
| 1 | ಅಳತೆ ಪಟ್ಟಿ | 01 | 14.00 | 16.00 | 16.50 | 16.50 | | | |
| 2 | ವಾಲಿಬಾಲ್ | | | | | | | | |
| 3 | ವಾಲಿಬಾಲ್ | | | | | | | | |
| 4 | ವೀಸಲ್ | | | | | | | | |
| 5 | ಹ್ಯಾಮರ್ | | | | | | | | |
| | ಹೀಗೆ ಮುಂದುವರೆಸುವುದು | | | | | | | | |
| | ಒಟ್ಟು | | | | | | | | |

**(ಒಟ್ಟು ಹಣ---------- ರೂ. -----------ಪೈಸೆ ಮಾತ್ರ)**

ದೈಹಿಕ ಶಿಕ್ಷಣ ಶಿಕ್ಷಕರ ಸಹಿ **ಮುಖ್ಯ ಶಿಕ್ಷಕರ ಸಹಿ**

**ಸೂಚನೆ:**

1. **ಈ ಹಣವನ್ನು ಶಾಲೆಯ ಸಂಚಿತ ನಿಧಿಗೆ ಜಮಾಯಿಸಬೇಕು.**
2. **ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನು ಒಟ್ಟುಗೂಡಿಸಿ ಛಾಯಾಪ್ರತಿಯನ್ನು ತೆಗೆಸಬೇಕು.**
3. **ಹರಾಜು ಪ್ರಕ್ರಿಯೆಗೆ ಇಲಾಖೆಯ ಅನುಮತಿ ಪತ್ರದಲ್ಲಿ ನೀಡಿರುವ ನಿಬಂಧನೆಗಳನ್ನು ಪಾಲಿಸಬೇಕು.**

## ಕ್ರೀಡಾ ಸಂಘದ ರಚನೆ

ಕ್ರೀಡಾ ಸಂಘ ಶಾಲೆಯಲ್ಲಿ ರಚನೆ ಮಾಡುವುದು ಕಡ್ಡಾಯವಾಗಿದೆ.

ಗೌರವ ಅಧ್ಯಕ್ಷರು : ಮುಖ್ಯೋಪಾಧ್ಯಾಯರು/ಉಪ ಪ್ರಾಂಶುಪಾಲರು
ಮಾರ್ಗದರ್ಶಕರು : ದೈಹಿಕ ಶಿಕ್ಷಣ ಶಿಕ್ಷಕರು
ಅಧ್ಯಕ್ಷರು : ವಿದ್ಯಾರ್ಥಿಗಳು
ಉಪಾಧ್ಯಕ್ಷರು : ವಿದ್ಯಾರ್ಥಿಗಳು
ಕಾರ್ಯದರ್ಶಿಗಳು : ವಿದ್ಯಾರ್ಥಿಗಳು
ಸಹ ಕಾರ್ಯದರ್ಶಿ : ವಿದ್ಯಾರ್ಥಿಗಳು
ಖಜಾಂಚಿ : ವಿದ್ಯಾರ್ಥಿಗಳು

ದೈಹಿಕ ಶಿಕ್ಷಣ ಶಿಕ್ಷಕರ ಸಹಿ ಮುಖ್ಯೋಪಾಧ್ಯಾಯರ ಸಹಿ

ಬೆಸ ಸಂಖ್ಯೆಯಲ್ಲಿ ಸಂಘದ ರಚನೆಯಾಗಬೇಕು ಸಂಘದ ಸಭೆಗಳ ಮೂಲಕ ಕ್ರೀಡೆಗಳಿಗೆ/ದೈ.ಶಿ. ಸಂಬಂಧಪಟ್ಟ ಪ್ರಗತಿಯನ್ನು ಕೈಗೊಳ್ಳಬೇಕು.

## *ಕ್ರೀಡಾ ಆಯವ್ಯಯ (ಮುಂಗಡ ಪತ್ರ)*

**ಕ್ರೀಡಾ ಆಯವ್ಯಯವನ್ನು ಜೂನ್ 30ರಿಂದ ಜು31ಲೈ ರ ಒಳಗೆ ಸಿದ್ದಪಡಿಸಿರಬೇಕು.**

| ಕ್ರ.ಸಂ. | ತರಗತಿ | ಆದಾಯ | | | ವೆಚ್ಚ | | | ದೊರೆತ ಹಣ |
|---|---|---|---|---|---|---|---|---|
| | | ವಿದ್ಯಾರ್ಥಿಗಳ ಒಟ್ಟು ಸಂಖ್ಯೆ | ಕ್ರೀಡಾ ಶುಲ್ಕ | ಒಟ್ಟು ಹಣ | ಕ್ರ.ಸಂ. | ಹಂಚಿಕೆ | ಶೇಕಡವಾರು | |
| 1<br>2<br>3<br>4<br>5 | | | | | | | | |
| | ಒಟ್ಟು | | | | | ಒಟ್ಟು | | |

ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯೋಪಾಧ್ಯಾಯರ ಸಹಿ

**ಉದಾಹರಣೆಗಾಗಿ**

ಶಾಲೆಯ ಹೆಸರು:

2016–17ನೇ ಸಾಲಿನ ಆಯವ್ಯಯ ಪತ್ರ ದಿನಾಂಕ:------------

| ಕ್ರ. ಸಂ. | ತರಗತಿ | ಆದಾಯ | | | ವೆಚ್ಚ | | | ದೊರೆತ ಹಣ |
|---|---|---|---|---|---|---|---|---|
| | | ವಿದ್ಯಾರ್ಥಿಗಳ ಒಟ್ಟು ಸಂಖ್ಯೆ | ಕ್ರೀಡಾ ಶುಲ್ಕ | ಒಟ್ಟು ಹಣ | ಕ್ರ.ಸಂ. | ಹಂಚಿಕೆ | ಶೇಕಡವಾರು | |
| 1 | 8ನೇ ತರಗತಿ | 112 | 20 | 2240 | 1 | ಕ್ರೀಡಾ ಸಾಮಾಗ್ರಿಗಳ ಖರೀದಿಗೆ | 65% | 4173 |
| 2 | 9ನೇ ತರಗತಿ | 124 | 20 | 2480 | 2 | ಪಂದ್ಯಾಟಗಳಿಗೆ | 30% | 1926 |
| 3 | 10ನೇ ತರಗತಿ | 85 | 20 | 1700 | 3 | ಇತರೆ | 05% | 321 |
| | ಒಟ್ಟು | | | 6420 | | ಒಟ್ಟು | | 6420 |

(ಒಟ್ಟು ಆದಾಯ ಆರು ಸಾವಿರದ ನಾಲ್ಕು ನೂರ ಇಪ್ಪತ್ತು ರೂ.ಗಳು ಮಾತ್ರ)
(ಒಟ್ಟು ವೆಚ್ಚ ಆರು ಸಾವಿರದ ನಾಲ್ಕು ನೂರ ಇಪ್ಪತ್ತು ರೂ.ಗಳು ಮಾತ್ರ)

ದೈಹಿಕ ಶಿಕ್ಷಣ ಶಿಕ್ಷಕರ ಸಹಿ ಮುಖ್ಯೋಪಾಧ್ಯಾಯರ ಸಹಿ

**ಸೂಚನೆಗಳು:**

1. 50 ಪೈಸೆ ಅಥವಾ ಅದಕ್ಕಿಂತ ಕಡಿಮೆ ಹಣವಾದರೆ 50 ಪೈಸೆ ಅಥವಾ ಅದಕ್ಕಿಂತ ಹೆಚ್ಚಾಗಿ ಮುಂದಿನ ರೂಗೆ ನೋಡಿ ಸರಿದೂಗಿಸುವುದು.
2. ಇತರೆ 5%ಹಣವನ್ನು ಕ್ರೀಡಾ ಸಾಮಾಗ್ರಿಗಳ ರಿಪೇರಿಗೆ ಅಥವಾ ಇತರೆ ಕ್ರೀಡಾ ಸಾಮಾಗ್ರಿಗಳ ರಿಪೇರಿಗೆ ಅಥವಾ ಇತರೆ ಕ್ರೀಡಾ ಸಾಮಾಗ್ರಿಗಳ ವೆಚ್ಚಕ್ಕೆ.
3. ಪಂದ್ಯಾಟಗಳಿಗೆ ನಿಗಧಿಪಡಿಸಿರುವ ಶೇ.30ಹಣ ಪಂದ್ಯಾಟಗಳಿಗೆ ಕೊರತೆಯಾದರೆ ಕ್ರೀಡಾಪ್ರಸಕ್ತ/ ಸಂಚಿತ ಅಥವಾ ಯಾವುದೇ ಪ್ರಸಕ್ತ/ ಸಂಚಿತ ನಿಧಿಯಿಂದ ಪಡೆಯಲು ಆಯುಕ್ತರ ಆದೇಶವಿದೆ.

# ಬೇಡಿಕೆ ಪುಸ್ತಕ

ಇಲ್ಲಿ ಒಂದು ವಹಿಯನ್ನಾಗಲಿ ಇಲ್ಲವೇ ಫೈಲ್ ಆಗಲೀ ನಿರ್ವಹಣೆ ಮಾಡಬಹುದಾಗಿದ್ದು, ಆಯಾ ಶೈಕ್ಷಣಿಕ ವರ್ಷದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾಭಿವೃದ್ಧಿ/ಸಂಘಟನೆಗಳಿಗೆ ಕುರಿತಂತೆ ಅವಶ್ಯಕತೆಗಳ ಪೂರೈಕೆಗಾಗಿ ಮುಖ್ಯಸ್ಥರಿಗೆ ಲಿಖಿತವಾಗಿ ಬೇಡಿಕೆ ಸಲ್ಲಿಸಿ ದಾಖಲೆ ಇಡುವುದು ಇದರ ಮುಖ್ಯ ಉದ್ದೇಶ. ಕೆಳಕಾಣಿಸಿದ ರೀತಿಯಲ್ಲಿ ಸಂದರ್ಭಕ್ಕನುಸಾರವಾಗಿ ಬೇಡಿಕೆ/ಕೋರಿಕೆ ಸಲ್ಲಿಸಬಹುದು.

2. ಕ್ರೀಡೋಪಕರಣ ಪೂರೈಕೆ (ಸೂಚನೆ–ಮುಖ್ಯಸ್ಥರು ಲಭ್ಯ ಕ್ರೀಡೋಪಕರಣಗಳನ್ನು ವರ್ಷದ ಕೊನೆಗೆ ಮಾರ್ಚ್‌ದಲ್ಲಿ ಪೂರೈಸಿದ್ದರೆ. ಜೂನ್‌ನಲ್ಲಿ ಪ್ರಾರಂಭವಾಗಿನಿಂದ ಉಪಯೋಗಿಸಲು ಅನುಕೂಲವಾಗುವುದು.

3. ಅವಶ್ಯಕವಾಗಿ ಬೇಕಾಗಿರುವ ವಹಿಗಳ ಪೂರೈಕೆಗಾಗಿ

4. ಕ್ರೀಡಾಕೂಟ ಸಂಘಟನೆಯ ವೆಚ್ಚ

5. ಕ್ರೀಡಾಕೂಟಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಹಾಗೂ ಅವರ ಜೊತೆಗೆ ಬರಬೇಕಾದ ತಂಡದ ವ್ಯವಸ್ಥಾಪಕರ ನೇಮಕಾತಿಗಾಗಿ ಕೋರಿಕೆ.

6. ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವವರಿಗೆ ಪ್ರವಾಸ/ದಿನಭತ್ಯೆ ಪೂರೈಕೆಗಾಗಿ ಕೋರಿಕೆ.

ದಿನಾಂಕ ನಮೂದಿಸಿ ಬೇಡಿಕೆ ಪತ್ರ ಸಲ್ಲಿಸುವುದು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದಾಗಿದೆ.

**ಉದಾಹರಣೆಗೆ:** ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವ ಮಕ್ಕಳಿಗೆ ಮತ್ತು ತಂಡದ ಮೇಲ್ವಿಚಾರಕರಿಗೆ ದಿನಭತ್ಯೆ ಮತ್ತು ಪ್ರಯಾಣಭತ್ಯೆ ವಿಷಯವಾಗಿ ಬೇಡಿಕೆ

ಸೂಚನೆ:– ಮೊದಲು ಮುಖ್ಯೋಪಾಧ್ಯಾಯರು/ಉಪಪ್ರಾಂಶುಪಾಲರಿಗೆ ಬೇಡಿಕೆ ಪತ್ರ ಬರೆದು ನಂತರ ಬೇಡಿಕೆಯ ಪಟ್ಟಿ ಇರಬೇಕು

ದಿನಭತ್ಯೆ ಪ್ರಯಾಣ ಭತ್ಯೆ ವಿವರ

| ಕ್ರ. ಸಂ. | ದಿನಾಂಕ | ಕ್ರೀಡೆಗಳ ವಿವರ | ಒಟ್ಟು ದಿನಗಳು | ಕ್ರೀಡಾ ಪಟುಗಳ ಸಂಖ್ಯೆ | ಒಟ್ಟು ಕ್ರೀಡಾಪಟುಗಳ ಸಂಖ್ಯೆ ಮತ್ತು ದಿನಭತ್ಯೆ | ಒಟ್ಟು ಪ್ರಯಾಣ ಭತ್ಯೆ | ಒಟ್ಟು |
|---|---|---|---|---|---|---|---|
| 1 | 20-7-2015 | ಕಬಡ್ಡಿ<br>ವಾಲಿಬಾಲ್ | 02<br>01 | 12<br>07 | 12x80= 960<br>07x40= 280 | 19x10=190 | 1430 |
| 2 | 22-7-2015 | ಖೋ–ಖೋ<br>(ಹೀಗೆ ಮುಂದುವರೆಯವುದು | 01 | 12 | 12x40=480 | 12x10=120 | 600=00 |

ಒಟ್ಟು

(ಒಟ್ಟು------------------ರೂಗಳು ಮಾತ್ರ) ಇಂತಿ ತಮ್ಮ ವಿಶ್ವಾಸಿ

ದೈಹಿಕ ಶಿಕ್ಷಣ ಹೆಸರು ಸಹಿ

## *6. ಕ್ರೀಡಾ ಸೂಚನಾ ಪುಸ್ತಕ*

ಆಯಾ ಶೈಕ್ಷಣಿಕ ವರ್ಷದಲ್ಲಿ ದೈಹಿಕ ಶಿಕ್ಷಣ ಕ್ರೀಡೆಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮದ ಕುರಿತು ಶಾಲೆಯ ಎಲ್ಲ ಮಕ್ಕಳಿಗೆ ಅಧಿಕೃತವಾಗಿ ಬರವಣಿಗೆಯ ಮೂಲಕ ಪ್ರಕಟಪಡಿಸಿ ಆ ಕುರಿತು ದಾಖಲೆ ಇಡುವುದಕ್ಕಾಗಿ ಈ ಪುಸ್ತಕದ ಅವಶ್ಯಕತೆ ಇರುತ್ತದೆ. ಕೆಲವು ಉದಾಹರಣೆಗಳು ಕೆಳಗಿನಂತಿವೆ. (ದೈಹಿಕ ಶಿಕ್ಷಣ ಮತ್ತು ಕ್ರೀಡೆಗೆ ಸಂಬಂಧಿಸಿದಂತೆ ಮಾತ್ರ)

ಶಾಲಾ ಮಟ್ಟದ ಕ್ರೀಡಾಕೂಟ ಸಂಘಟಿಸುವ ಹಾಗೂ ಕ್ರೀಡಾಪಟುಗಳ ಆಯ್ಕೆ ಬಗ್ಗೆ ಜ್ಞಾಪನ ಹೊರಡಿಸಿ ತರಗತಿವಾರು ತಿಳಿಸಿ ಆ ತರಗತಿಯಲ್ಲಿ ಶಿಕ್ಷಕರು ಪಡೆಯುವುದು. ಶಾಲಾಂತರ್ಗತ ಸ್ಪರ್ಧೆಗಳ ಸಂಘಟನೆ/ವಿವರ ಪ್ರಕಟಣೆ ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಹರಾಜು ಏರ್ಪಡಿಸಬೇಕಾದಲ್ಲಿ ಪ್ರಕಟಿಸಿ ದಾಖಲೆ ಇಡುವುದು ಇತ್ಯಾದಿ.

## *7. ಕ್ರೀಡಾ ಸಾಮಾಗ್ರಿಗಳ ವಿತರಣಾ ಪುಸ್ತಕ*

ಸದರಿ ಪುಸ್ತಕ ನಿರ್ವಹಣೆ ನಮೂನೆಯನ್ನು ನೀಡಲಾಗಿದ್ದು, ಹೊಸದಾಗಿ ಪಡೆದ ಕ್ರೀಡೋಪಕರಣಗಳು ಬಳಕೆ ಆಗಿವೆ ಎಂಬುದನ್ನು ವಿತರಣೆ ಮಾಹಿತಿಯನ್ನು ದಾಖಲಿಸಬೇಕು. ಇದರಿಂದ ಕ್ರೀಡಾವಿಭಾಗಕ್ಕೆ ಪೂರೈಕೆ ಆದ ಕ್ರೀಡಾ ಸಾಮಾಗ್ರಿಗಳು ಮಕ್ಕಳಿಗೆ ಉಪಯೋಗಿಸಲು ಕೊಡಲಾಗುತ್ತದೆ. ಅಲ್ಲದೆ ಅವು ಹೊಸದು ನಂತರ ಉಪಯುಕ್ತ ನಂತರ ಅನುಪಯುಕ್ತ ಸ್ಥಿತಿ ತಲುಪಿದೆ ಎಂಬುದನ್ನು ದಾಖಲೆ ಸಹಿತ ಹೇಳಲು ಅನುಕೂಲ ಆಗುತ್ತದೆ.

**ನಮೂನೆ**

ಕ್ರೀಡಾ ಸಾಮಾಗ್ರಿಗಳ ವಿತರಣಾ ಪುಸ್ತಕ

SPORTS ARTICLES ISSUE REGISTER

| ಕ್ರಮ ಸಂಖ್ಯೆ | ದಿನಾಂಕ | ವಿದ್ಯಾರ್ಥಿಯ ಹೆಸರು | ದಾಖಲಾತಿ ಸಂಖ್ಯೆ ಮತ್ತು ವರ್ಷ | ತರಗತಿ ವರ್ಗ | ಸಾಮಾಗ್ರಿಗಳ ಹೆಸರು | ಸಾಮಾಗ್ರಿಗಳ ಸಂಖ್ಯೆ | ವಿದ್ಯಾರ್ಥಿಯ ಸಹಿ (ಪಡೆದುದಕ್ಕೆ) | ಹಿಂತಿರುಗಿದ ದಿನಾಂಕ | ವಸ್ತು ಸ್ಥಿತಿ | ವಿದ್ಯಾರ್ಥಿಯ ಸಹಿ ಹಿಂತಿರುಗಿಸಿದಕ್ಕೆ | ಕ್ರೀಡಾ ಕಾರ್ಯದರ್ಶಿಯವರ (ದೈ.ಶಿ.ಶಿ)ಸಹಿ | ಷರಾ |
|---|---|---|---|---|---|---|---|---|---|---|---|---|
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

## *ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ವಿತರಣಾ ವಿವರ*

ಕ್ರೀಡಾಕೂಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ದಿನಭತ್ಯೆ ಮತ್ತು ಪ್ರಯಾಣಭತ್ಯೆ ವಿತರಣಾ ವಿವರ ಕ್ರೀಡಾಕೂಟ ನಡೆದ ದಿನಾಂಕ: 22.08.2015ರಿಂದ 23.08.2015

ದಿನಾಂಕ:

***ಮಟ್ಟ: ಹೋಬಳಿ/ತಾಲ್ಲೂಕು/ಜಿಲ್ಲಾ***

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ತರಗತಿ ಮತ್ತು ವರ್ಗ | ಪಡೆದ ದಿನ ಭತ್ಯೆ ವಿವರ | | ಪ್ರಯಾಣ ಭತ್ಯೆ | ಪಡೆದ ಒಟ್ಟು ಹಣ | ವಿದ್ಯಾರ್ಥಿಗಳ ಸಹಿ | ಷರಾ |
|---|---|---|---|---|---|---|---|---|
| | | | ದಿ:೨೨.೮.೧೫ | ದಿ:೨೩.೮.೧೫ | | | | |
| 1 | ರಮೇಶ | 8A | 30 | 30 | 8x8=16 | 76=00 | | |
| 2 | ಬಾಬು | 10C | 30 | - | 16 | 46=00 | | |
| 3 | ಶಿವರಾಜ್ | 9 B | - | 30 | 16 | 46=00 | | |
| 4 | ಕಿರಣ್ | 10 A | 30 | 30 | 16 | 76=00 | | |
| 5 | ತಂಡದ ಮೇಲ್ವಿಚಾರಕರು | | | | | | | |
| | ಒಟ್ಟು | | | | | | | |

(ಒಟ್ಟು ಹಣ ------------ ರೂ.ಗಳು ಮಾತ್ರ)

ಹೀಗೆ ಮುಂದುವರೆಯುವುದು ಯಾವ ದಿನಾಂಕಗಳಲ್ಲಿ ಭಾಗವಹಿಸುತ್ತಾರೋ ಆ ದಿನಾಂಕಗಳಿಗೆ ಹಣ ನೀಡುವುದು.

ಸತೀಶ್ ತಂಡದ ಮೇಲ್ವಿಚಾರಕ

ದೈಹಿಕ ಶಿಕ್ಷಕರ ಸಹಿ

ಸೂಚನೆ:

| ದಿನಭತ್ಯೆ ವಿವರ | ವಿದ್ಯಾರ್ಥಿಗಳಿಗೆ | ತಂಡದ ಮೇಲ್ವಿಚಾರಕರಿಗೆ |
|---|---|---|
| 1. ಹೋಬಳಿ ಮಟ್ಟ/ತಾಲ್ಲೂಕು ಮಟ್ಟ | 30 | 40 |
| 2. ಜಿಲ್ಲಾ ಮಟ್ಟ | 60 | 70 |
| 3. ವಿಭಾಗೀಯ ಮಟ್ಟ | – | – |
| 4. ರಾಜ್ಯ ಮಟ್ಟ | – | – |

## *ದಿನಚರಿ*

ದೈಹಿಕ ಶಿಕ್ಷಣ ಶಿಕ್ಷಕರು ಪ್ರತಿದಿನ ತಾನು ನಿರ್ವಹಿಸುವ ಕೆಲಸಗಳ ಬಗ್ಗೆ ನಮೂದಿಸುವುದಾಗಿದೆ.

ವಿವರ:

| **ದಿನಾಂಕ** | **ತರಗತಿ & ವರ್ಗ** | **ಅವಧಿ/ಸಮಯ** | **ಕಲಿಸಿದ ವಿಷಯ/ಬೋಧನಾ ವಿಷಯ** | **ಷರಾ** |
|---|---|---|---|---|
| | | | | |
| | | | | |

## 8.ಗುಂಪು ರಚನಾ ಪುಸ್ತಕ

1. ಕ್ರೀಡಾ ಸ್ಪರ್ಧೆಯ ದೈಹಿಕ ಸಾಮಾರ್ಥ್ಯವನ್ನು ಅವಲಂಬಿಸಿದದು, ಸಮಬಲ ಅಥವಾ ಸಮಾನ ಸಾಮಾರ್ಥ್ಯವುಳ್ಳವರ ಮಧ್ಯ ಕ್ರೀಡಾಸ್ಪರ್ಧೆ ಜರಗುಬೇಕು ಎಂಬ ಉದ್ದೇಶ ಈಡೇರಿಕೆಗೆ ಎಲ್ಲ ತರಗತಿ ಮಕ್ಕಳನ್ನೊಳಗೊಂಡ ಗುಂಪುಗಳನ್ನು ರಚಿಸಿ, ದಾಖಲೆ ಇಡಲು ಈ ಪುಸ್ತಕದ ಅವಶ್ಯಕತೆ ಇದೆ.

**ಸಲಹೆಗಳು:** 1. ಮೇಲಿನ ತರಗತಿ ಮಕ್ಕಳ ದೈಹಿಕ ಸಾಮಾರ್ಥ್ಯ ಕೆಳವರ್ಗದವರಿಗಿಂತ ಹೆಚ್ಚಾಗಿರುವುದರಿಂದ ತರಗತಿಗಳ ಮಧ್ಯದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಬಾರದು.

2. ಪ್ರತಿ ಗುಂಪು ಕಡಿಮೆ ಸಂಖ್ಯೆ ಮಕ್ಕಳು ಇರುವಂತೆ ಕ್ರಮ ಕೈಗೊಂಡರೆ ಗುಂಪುಗಳ ಮಧ್ಯೆ ಏರ್ಪಡಿಸಿದ ಸ್ಪರ್ಧೆಯಲ್ಲಿ ಆ ಗುಂಪಿನ ಪ್ರತಿಯೊಬ್ಬರೂ ಭಾಗವಹಿಸಲು ಅವಕಾಶ ಸಿಗುತ್ತದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಗುಂಪುಗಳನ್ನು ರಚಿಸಬೇಕು.

3. ಪ್ರತಿ ಗುಂಪಿನಲ್ಲಿ ಕ್ರೀಡಾಪಟುಗಳು, ಕಲಾಕಾರರು, ಭಾಷಣಕಾರರು, ಬುದ್ಧಿವಮತರು, ಹಾಡುಗರು ಹಾಗೂ ಸಮಬಲವುಳ್ಳವರು ಬರುವಂತೆ ಗುಂಪುಗಳ ರಚನೆ ಮಾಡುವುದು ಸೂಕ್ತ.

4. ಗಂಡು ಹಾಗೂ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಗುಂಪುಗಳನ್ನು ರಚಿಸಿ ಸ್ವಾತಂತ್ರ್ಯ ಯೋಧರ, ಸಾಹಿತಿಗಳ, ನದಿಗಳ, ಹೂವುಗಳ ಇಲ್ಲವೆ ಬಣ್ಣಗಳ ಇತ್ಯಾದಿ ಹೆಸರು ಕೊಟ್ಟು ವಿಶೇಷ ಬಣ್ಣದ ಧ್ವಜ ನಿರ್ಮಿಸಬೇಕು.

5. ಗುಂಪು ಗುಂಪುಗಳ ಮಧ್ಯೆ ಸ್ಪರ್ಧೆ ಅಂದರ ಶಾಲಾಂತರ್ಗತ ಸ್ಪರ್ಧೆ ಏರ್ಪಡಿಸಿ, ಮಕ್ಕಳಲ್ಲಿ ಸ್ಪರ್ಧಾ ಮನೋಭಾವನೆಯನ್ನು ಮೂಡಿಸುವ ಪ್ರಯತ್ನ ಕೈಗೊಳ್ಳಬೇಕು.

6.ಆಯಾ ವರ್ಷಕ್ಕೆ ರಚಿಸಿದ ಗುಂಪು ಹಾಗೂ ಗುಂಪಿನಲ್ಲಿ ಬರುವ ಮಕ್ಕಳ ಹೆಸರುಗಳನ್ನು ಬರೆದು ದಾಖಲೆ ಇಡಬೇಕು.

9. ಸ್ಪರ್ಧೆಗಳ (ಇಂಟ್ರಾಮುರಲ್ಸ್/ ಎಕ್ಸ್ಟ್ರಾಮುರಲ್ಸ್)

ಶಾಲಾಂತರ್ಗತ ಮತ್ತು ಅಂತರ್ ಶಾಲಾ ಕ್ರೀಡಾಸ್ಪರ್ಧೆಗಳ ಪುಸ್ತಕ: ಒಂದು ಶಾಲೆಯಲ್ಲಿ ಬಾಲಕರು/ಬಾಲಕಿಯರಿಗಾಗಿ ಪ್ರತ್ಯೇಕವಾಗಿ ರಚನೆಗೊಂಡ ಗುಂಪುಗಳ ಮಧ್ಯೆ ಸ್ಪರ್ಧೆಗಳು ಜರುಗಿದಾಗ ಅದು ಶಾಲಾಂತರ್ಗತ ಸ್ಪರ್ಧೆ (Intra Mural) ಎಂತಲೂ ಒಂದು ವೇಳೆ ಶಾಲೆಯು ಬೇರೊಂದು ಶಾಲೆಯ ಮಕ್ಕಳ ಜೊತೆ ಸ್ಪರ್ಧಿಸಿದರೆ ಅದು ಅಂತರ್ ಶಾಲಾ ಸ್ಪರ್ಧೆ (Extra Mural) ಎಂತಲೂ ಕರೆಯುತ್ತಾರೆ.

ಸ್ಪರ್ಧೆ ಹೆಸರು: ಯಾರ ಯಾರ ಮಧ್ಯೆ ಸ್ಪರ್ಧೆ ಸ್ಥಳ---------ದಲ್ಲಿ---------------- ದಿನಾಂಕದಂದು --------ವೇಳೆಗೆ ಜರುಗಿದ ಬಗ್ಗೆ ದಾಖಲೆ.

ಭಾಗವಹಿಸಿದ ಗುಂಪುಗಳು/ಶಾಲೆಗಳ ವಿವರ

ಫಲಿತಾಂಶ

ವಿತರಿಸಿದ ಬಹುಮಾನದ ವಿವರ/ಇಲ್ಲವೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವುದು.

ಲಾಭಗಳು: ನಿರಂತರ ಶಿಸ್ತುಬದ್ದವಾಗಿ ಇಂತ ಸ್ಪರ್ಧೆಗಳನ್ನು ಏರ್ಪಡಿಸುವುದರಿಂದ

1. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಹೆಚ್ಚುತ್ತದೆ.
2. ಸೋಲು/ಗೆಲುವುಗಳ ಕಹಿ–ಸಿಹಿ ಅನುಭವ ತಿಳಿಯುತ್ತದೆ.
3. ಸೋತಾಗ ಅದನ್ನು ಅರಗಿಸಿಕೊಳ್ಳುವ ಹಾಗೂ ಮನೋಸ್ಥೈರ್ಯ ಜೊತೆಗೆ ಆತ್ಮಬಲ ಹೆಚ್ಚುತ್ತದೆ.
4. ಸೋಲನ್ನು ಗೆಲ್ಲುವ ಆತ್ಮ ವಿಶ್ವಾಸ ಹೆಚ್ಚುತ್ತದೆ.
5. ಇದರಿಂದಾಗಿ ಮಕ್ಕಳಲ್ಲಿ ಧನಾತ್ಮಕ ಭಾವನೆ ವೃದ್ಧಿಗೊಳ್ಳುತ್ತದೆ.
6. ಸೋಲೇ ಗೆಲುವಿನ ಮೂಲ ಎಂಬ ಉಕ್ತಿಯಂತೆ ಗೆಲ್ಲಲೇಬೇಕೆಂಬ ಛಲ, ಪ್ರಯತ್ನ ಮಾಡುವ ಭಾವನೆ ಕುದುರಲು ಸಹಕಾರಿ ಆಗುತ್ತದೆ.

## *10.ಕ್ರೀಡಾ ಸಾಧನಾ ಪುಸ್ತಕ*

ಕೆಲವು ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಒಳ್ಳೆಯ ಕಾರ್ಯನಿರ್ವಹಿಸಿ ಮಕ್ಕಳು ರಾಜ್ಯ/ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುತ್ತಾರೆ. ಆ ಕುರಿತು ದಾಖಲೆಗಳನ್ನು ಅಂದರೆ ಯಾವ ವರ್ಷ, ಯಾವ ಮಕ್ಕಳು ಯಾವ ಸ್ಪರ್ಧೆಯಲ್ಲಿ ಸಾಧನೆ ಮಾಡಿದ್ದಾರೆ ಎಂಬುದರ ಬಗ್ಗೆ ದಾಖಲೆ ಇಟ್ಟು ಮುಖ್ಯಸ್ಥರಿಂದ ಸಹಿ ಪಡೆದು ಮೇಲಾಧಿಕಾರಿಗಳು ಬಂದಾಗ ತಮ್ಮ ಸಾಧನೆ ತೋರಿಸುವಲ್ಲಿ ವಿಫಲರಾಗುತ್ತಿದ್ದಾರೆ. ಕಾರಣ ಇಂಥ ದಾಖಲೆಯ ಅವಶ್ಯಕತೆ ಇದ್ದು (ಫೋಟೋ/ಪತ್ರಿಕೆಯಲ್ಲಿ ಬಂದಿದ್ದರೆ ಅದರ ದಾಖಲೆಗಳೊಂದಿಗೆ) ಕಾಯ್ದಿರಿಸಲು ಕ್ರಮ ಕೈಗೊಳ್ಳಬೇಕು.

ಆಯಾ ವರ್ಷದಲ್ಲಿ ಕೇಂದ್ರಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಸಾಧಿಸಿದ ಸಾಧನೆಯನ್ನು ಇಡಲು ಕ್ರಮ ಕೈಗೊಳ್ಳುವುದು. ನಮೂನೆ ಹೀಗೆಯೇ ಇರಬೇಕೆಂದು ಕಡ್ಡಾಯವಿಲ್ಲ. ಆ ಶಿಕ್ಷಕರ ವಿವೇಚನೆಗೆ ಬಿಡಲಾಗಿದೆ. ಜಿಲ್ಲೆಯಿಂದ ಗೆದ್ದು ವಿಭಾಗ/ರಾಜ್ಯ/ ರಾಷ್ಟ್ರಮಟ್ಟದಲ್ಲಿ ಆದ ಸಾಧನೆಗಳನ್ನು ಕಾಯ್ದಿರಿಸುವುದು.

**ಮಾದರಿ ನಮೂನೆ ಹೀಗಿರಬಹುದು.**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ತರಗತಿ & ವರ್ಗ | ದಾಖಲಾತಿ ಸಂಖ್ಯೆ | ಜನ್ಮ ದಿನಾಂಕ | ಭಾಗವಹಿಸಿದ ಸ್ಪರ್ಧೆ | ಫಲಿತಾಂಶ (ಪಡೆದ ಸ್ಥಾನ) | | | | | |
|---|---|---|---|---|---|---|---|---|---|---|---|
| | | | | | | ಕೇಂದ್ರ ಮಟ್ಟ | ವಲಯ ಮಟ್ಟ | ತಾಲ್ಲೂಕು ಮಟ್ಟ | ಜಿಲ್ಲಾ ಮಟ್ಟ | ವಿಭಾಗ ಮಟ್ಟ | ರಾಜ್ಯ ಮಟ್ಟ |
| 1 | | | | | | | | | | | |
| 2 | | | | | | | | | | | |
| 3 | | | | | | | | | | | |
| 4 | | | | | | | | | | | |
| 5 | | | | | | | | | | | |

## *11.ಆರೋಗ್ಯ ತಪಾಸಣಾ– ಆರೋಗ್ಯ ಕಾರ್ಡುಗಳು*

ಪ್ರತಿ ವರ್ಷ ಆಗಸ್ಟ್ ತಿಂಗಳಿನಲ್ಲಿ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿ "ಆರೋಗ್ಯ ತಪಾಸಣೆಮಾಸಾಚರಣೆ" ಜರುಗುತ್ತದೆ. ಅದಕ್ಕಾಗಿ ಪ್ರತಿವರ್ಷ ಕೇವಲಹೊಸದಾಗಿ ದಾಖಲಾಗುವ ಒಂದನೇ ತರಗತಿ ಮಕ್ಕಳಿಗೆಮಾತ್ರಹೊಸದಾಗಿ ಹೆಲ್ತ್ ಕಾರ್ಡ್‌ಗಳನ್ನು ಪೂರಯಕೆ ಆಗುತ್ತವೆ. ಈ ರೀತಿ ಒಮ್ಮೆ ಓರ್ವ ಮಗುವಿಗೆ ಗೊತ್ತುಪಡಿಸಿದ "ಹೆಲ್ತ್ ಕಾರ್ಡ್"ಹತ್ತನೇ ತರಗತಿವರೆಗೆಮುಂದುವರಿಯುತ್ತದೆ. ಕಾರಣ ಆಯಾ ತರಗತಿ ಶಿಕ್ಷಕರು/ಮುಖ್ಯಸ್ಥರುಸದರಿ ವಿದ್ಯಾರ್ಥಿಶಾಲೆಯಲ್ಲಿ ಇರುವವರೆಗೆ ಅಚ್ಚುಕಟ್ಟಾಗಿ ಕಾಯ್ದಿರಿಸಬೇಕುಮತ್ತು ಒಂದು ವೇಳೆ ಆ ವಿದ್ಯಾರ್ಥಿ/ನಿ ಬೇರೆ ಶಾಲೆಗೆ ಸ್ಥಳಾಂತರಗೊಂಡರೆ ವರ್ಗಾವಣೆ ಪತ್ರದೊಂದಿಗೆ ಈ ಹೆಲ್ತ್ ಕಾರ್ಡ್‌ನ್ನು ಕೂಡಾ ವರ್ಗಾಯಿಸಬೇಕು. ಅದರಂತೆ ವಿದ್ಯಾರ್ಥಿ ಸೇರ್ಪಡೆ ಆಗುವ ಶಾಲಾ ಮುಖ್ಯಸ್ಥರು ಹಿಂದಿನ ಶಾಲೆಯಿಂದ ಟಿ.ಸಿ. ಅಂತೆಯೇ ಹೆಲ್ತ್ ಕಾರ್ಡನ್ನು ಪಡೆಯಲು ಮರೆಯಬಾರದು.

ಈ ಕಾರ್ಡುಗಳನ್ನು ಆಯಾ ತರಗತಿ ಶಿಕ್ಷಕರು ಆರೋಗ್ಯ ತಪಾಸಣಾ ಪ್ರಾರಂಭಕ್ಕೆ ಮುನ್ನ ಪೂರ್ಣ ಭರ್ತಿ ಮಾಡಿ ಸಿದ್ದಗೊಳಿಸಿಟ್ಟಿರಬೇಕು.

ತರಗತಿಯಲ್ಲಿ ಕಂಡುಬರುವ ಗಂಭೀರ ಕಾಯಿಲೆ ಇರುವ ಮಕ್ಕಳ ಪಟ್ಟಿಯನ್ನು ತಯಾರಿಸಿಟ್ಟು ಪಾಲಕರ ಗಮನಕ್ಕೆ ತರುವ ಕೆಲಸವನ್ನು ಮುಖ್ಯಸ್ಥರು ಮಾಡಬೇಕು.ಒಂದು ವೇಳೆ ಇಂಥ ವಿದ್ಯಾರ್ಥಿಯನ್ನು ಮುಂದಿನ ಹಂತದ ಆಸ್ಪತ್ರೆಗೆ ಕಳುಹಿಸಬೇಕಾದಲ್ಲಿ ವಿವರವನ್ನು ಮುಖ್ಯಸ್ಥರು/ತರಗತಿ ಶಿಕ್ಷಕರು/ದೈಹಿಕ ಶಿಕ್ಷಕರು ಕಾಯ್ದಿರಿಸಬೇಕು.

## *12. ಕ್ರೀಡಾ ಚಾರ್ಟ್ಸ್, ಪಿಕ್ಚರ್ಸ್, ಆಲ್ಬಮ್:*

ವಿದ್ಯಾರ್ಥಿಗಳೇ ಸ್ವತಃ ಕ್ರೀಡೆಗೆ ಸಂಬಂಧಿಸಿದ ಕಬಡ್ಡಿ, ವಾಲಿಬಾಲ್, ಖೋಖೋ ಇತ್ಯಾದಿ ಅಂಕಣಗಳ ಚಿತ್ರ/ಡಯಾಗ್ರಾಮ ತೆಗೆಯುವುದು. ಕ್ರೀಡಾ ಚಾರ್ಟ್ಸ್, ಪತ್ರಿಕೆಗಳಲ್ಲಿ ಕ್ರೀಡೆಗೆ ಸಂಬಂಧಿಸಿದ ಪಿಕ್ಚರ್ಸ್/ಚಿತ್ರಗಳನ್ನು ಸಂಗ್ರಹಿಸುವುದು ಮತ್ತು ವಿದ್ಯಾರ್ಥಿಗಳ ಗುಂಪು ರಚನೆ ಒಂದು ಕ್ರೀಡೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಬರುವ ಚಿತ್ರ ಹಾಗೂ ಲೇಖನಗಳನ್ನು ಸಂಗ್ರಹಿಸಿ ವ್ಯವಸ್ಥಿತ ಹಾಗೂ ಕ್ರಮಬದ್ದವಾಗಿ ವಹಿಯಲ್ಲಿ ಜೋಡಿಸಿ ಆಲ್ಬಮ್ ಸಿದ್ದಗೊಳಿಸುವ ಹವ್ಯಾಸವನ್ನು ಬೆಳೆಸುವುದು.

ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿಯನ್ನು ಬೆಳೆಸುವುದರ ಜೊತೆಗೆ ಕ್ರೀಡೆಗಳ ಬಗೆಗಿನ ಜ್ಞಾನ ವೃದ್ಧಿ ಜೊತೆ ಸೃಜನಾತ್ಮಕ ಕ್ರಿಯಾತ್ಮಕ ಹಾಗೂ ರಚನಾತ್ಮಕ ಭಾವನೆಗಳನ್ನು ಮೂಡಿಸಬಹುದಾಗಿದೆ.

ಆಲ್ಬಮ್ ರಚನೆ ವಿಶೇಷವಾಗಿ ಕ್ರೀಡೆಗಳು ಜರುಗುವ ಸಂದರ್ಭದಲ್ಲಿ ತಯಾರಿಸುವಂತೆ ಪ್ರೇರೇಪಿಸಬಹುದು. ಉದಾ: ಕಾಮನ್‌ವೆಲ್ತ್ ಕ್ರೀಡೆಗಳು, ಒಲಂಪಿಕ್ ಕ್ರೀಡೆಗಳು ಟೆನಿಸ್ ಕ್ರೀಡೆಗಳು ಇತ್ಯಾದಿ ಜರುಗುವ ಸಂದರ್ಭದಲ್ಲಿ ತಯಾರಿಸಲು ಹೇಳುವುದು.

ಕ್ರೀಡಾ ಕೊಠಡಿ, ಗೋಡೆಗಳ ಮೇಲೆ ಕ್ರೀಡಾ ಚಾರ್ಟ್ಸ್, ಪಿಕ್ಚರ್‌ಗಳನ್ನು ವಿದ್ಯಾರ್ಥಿಗಳಿಂದ ಬಿಡಿಸಲು ಹೇಳಬಹುದು. ಇದರಿಂದ ಕ್ರೀಡಾ ಕೊಠಡಿಯನ್ನು ಅಂಧಗೊಳಿಸಬಹುದು. ಜೊತೆಗೆ ಕ್ರೀಡಾ ಕೊಠಡಿಯು ಕ್ರೀಡೆಗೆ ಸಂಬಂಧಿಸಿದ ಜ್ಞಾನ ಒದಗಿಸುವ ಸಾಧನವನ್ನಾಗಿ ರೂಪಿಸಬಹುದು.

## *13. ಅನುಪಾಲನಾ ಪುಸ್ತಕ*

ದೈಹಿಕ ಶಿಕ್ಷಣ ಮತ್ತು ಕ್ರೀಡೆಗೆ ಸಂಬಂಧಿಸಿದ ಮೇಲಾಧಿಕಾರಿಗಳು ಸಂದರ್ಶನ ಅಥವಾ ತಪಾಸಣಾ ಸಮಯದಲ್ಲಿ ನೀಡುವ ಸಲಹೆಗಳಿಗೆ ಉತ್ತರ ಸಿದ್ದಪಡಿಸುವುದು. ಒಟ್ಟಿನಲ್ಲಿ ಅವರು ಪೂರ್ಣಗೊಳಿಸಲು ಇಲ್ಲವೆ ಕೈಗೊಳ್ಳಲು ತಿಳಿಸಿದ ಕೆಲಸಗಳನ್ನು ಪೂರ್ಣಗೊಳಿಸಿ ದಾಖಲೆ ರೂಪದಲ್ಲಿ ಇಡುವುದು, ಮತ್ತು ಆ ಅಧಿಕಾರಿಗಳಿಗೆ ಒಂದು ಪ್ರತಿ ಒದಗಿಸುವುದೇ ಅನುಪಾಲನಾ ವರದಿ ಆಗಿದೆ.

ಇದಕ್ಕಾಗಿ ಸದರಿ ಪುಸ್ತಕದಲ್ಲಿ ಈ ರೀತಿ ದಾಖಲಿಸಬಹುದು.

ಅನುಪಾಲನಾ ವರದಿ (ಉದಾ–ಮಾದರಿ)

ಸಂದರ್ಶನ/ತಪಾಸಣಾಧಿಕಾರಿಗಳು:

ದಿನಾಂಕ:

ದೈಹಿಕ ಶಿಕ್ಷಣ: ಕ್ರೀಡೆಗೆ ಸಂಬಂಧಿಸಿದ ಸಲಹೆಗಳು

# ಮಾದರಿ ಪಾಠ ಟಿಪ್ಪಣಿ ನಮೂನೆ (ತಾತ್ವಿಕ)

**ವಿಷಯ: ದೈಹಿಕ ಶಿಕ್ಷಣ**

**ವರ್ಗ: 10ನೇ ತರಗತಿ** **ಶಿಕ್ಷಕರ ಹೆಸರು: ---------**

**ಘಟಕ : ಚಕ್ರ ಎಸೆತ**

**ಪಾಠದ ಉದ್ದೇಶ: ಚಕ್ರ ಎಸೆತದ ಸೆಕ್ಟರ್ ರಚನೆ, ಚಕ್ರದ ಬಗ್ಗೆ ಅರಿವು ಸ್ಪರ್ಧೆಯ ನಿಯಮಗಳನ್ನು ತಿಳಿಸಿ, ಪ್ರಖ್ಯಾತ ಆಟಗಾರರನ್ನು ಪರಿಚಯಿಸುವುದು.**

| ವಿಭಾಗ/ಅವಧಿ | ಕಲಿಕಾಂಶಗಳು | ಅನುಕೂಲಿಸಲು ರೂಪಿಸಿದ ಚಟುವಟಿಕೆ | ಪಾಠೋಪಕರಣಗಳು | ಮೌಲ್ಯಮಾಪನದ ತಂತ್ರ ಸಾಧನ | ಶಿಕ್ಷಕರ ಸ್ವ ಅವಲೋಕನ | ದಿನಾಂಕ |
|---|---|---|---|---|---|---|
| ತಾತ್ವಿಕ ಅವಧಿಗಳು | 1. ಅಂಕಣದ ರಚನೆ ಮತ್ತು ಅಳತೆ | ಚಕ್ರ ಎಸೆತದ ವೃತ್ತ/ಸೆಕ್ಟರ್ ರಚನೆ ವೃತ್ತದ ವ್ಯಾಸ–2.50 ಮೀ. ಸೆಕ್ಟರ್ ಕೊನೆ– 34.920 ವಿಸ್ತೃತ | ಪಠ್ಯ ಪುಸ್ತಕ, ಸೀಮೆಸುಣ್ಣ, ಕಪ್ಪುಹಲಗೆ | ಕಪ್ಪು ಹಲಗೆಯ ಮೇಲೆ ವೃತ್ತ ರಚಿಸುವಂತೆ ಹೇಳಿ ವೀಕ್ಷಣೆ ಮೂಲಕ ತಿಳಿಯುವುದು. ತಂತ್ರ: ವೀಕ್ಷಣೆ | | |
| | 2. ಚಕ್ರದ (ಡಿಸ್ಕಸ್) ರಚನೆ | ಎಸೆತದ ಚಕ್ರವು ಮರದಿಂದ ರಚನೆಯಾಗಿದ್ದು, ಸುತ್ತಲೂ ಲೋಹದ ಅಂಚನ್ನು ಅಳವಡಿಸಿರುತ್ತಾರೆ. | ಚಕ್ರ (ಡಿಸ್ಕಸ್) | ಪ್ರತಿಯೊಬ್ಬ ವಿದ್ಯಾರ್ಥಿ ಚಕ್ರವನ್ನು ಕೈಯಲ್ಲಿ ಹಿಡಿದು ಪ್ರಾಯೋಗಿಕವಾಗಿ ತಿಳಿಯುವುದು, ತಂತ್ರ: ವೀಕ್ಷಣೆ | | |
| | 3. ಸ್ಪರ್ಧೆಯ ನಿಯಮಗಳು | ಪುಸ್ತಕದಲ್ಲಿಯಿರುವಂತೆ ನಿಯಮಗಳನ್ನು ತಿಳಿಸುವುದು/ಬೋಧಿಸುವುದು. | ಪಠ್ಯಪುಸ್ತಕ, ಸೀಮೆಸುಣ್ಣ, ಕಪ್ಪುಹಲಗೆ | ಮೌಖಿಕ ಹಾಗೂ ತಾತ್ವಿಕ ಪರೀಕ್ಷಾ ವಿಧಾನ | | |
| | 4. ರಾಷ್ಟ್ರ ಹಾಗೂ ಅಂತರ್ ರಾಷ್ಟ್ರೀಯ ಕ್ರೀಡಾಪಟುಗಳ ವಿವರ ಹಾಗೂ ದಾಖಲೆಗಳು | ಕೃಷ್ಣ ಪೂನಿಯ, ವಿಕಾಸಗೌಡ, ಯುರ್ಗನ್, ಶುಲ್ಫ್, ಇವರುಗಳ ಪರಿಚಯ ಹಾಗೂ ದಾಖಲೆಗಳು | ಪಠ್ಯಪುಸ್ತಕ ಕ್ರೀಡಾಪಟುಗಳ ಭಾವಚಿತ್ರಗಳು | ವೀಕ್ಷಣಾ ಗುರುತಿಸುವಿಕೆ ಹಾಗೂ ಕಿರು ಪರೀಕ್ಷೆ ನಡೆಸುವುದು. | | |

# ಪಾಠದ ಟಿಪ್ಪಣಿ ನಮೂನೆ

ವಿಷಯ: ದೈಹಿಕ ಶಿಕ್ಷಣ

ವರ್ಗ: 10ನೇ ತರಗತಿ ಶಿಕ್ಷಕರ ಹೆಸರು: ------

ಕಲಿಸುವ ಉದ್ದೇಶಗಳು: ಸರ್ವಿಸ್ ಕೌಶಲ್ಯವನ್ನು ಅರಿಯುವುದು ಘಟಕ :ಪಂದ್ಯಾಟಗಳು: ವಾಲಿಬಾಲ್

| ವಿಭಾಗ/ಅವಧಿ | ಕಲಿಕಾಂಶಗಳು | ಅನುಕೂಲಿಸಲು ರೂಪಿಸಿದ ಚಟುವಟಿಕೆ | ಪಾಠೋಪಕರಣಗಳು | ಮೌಲ್ಯಮಾಪನದ ತಂತ್ರ ಸಾಧನ | ಶಿಕ್ಷಕರ ಸ್ವ ಅವಲೋಕನ | ದಿನಾಂಕ |
|---|---|---|---|---|---|---|
| ಪ್ರಾಯೋಗಿಕ | 1. ತೇಲುವ ಸರ್ವಿಸ್<br>2. ದೇಹವನ್ನು ತಿರುಗಿಸಿ ಹೊಡೆಯುವುದು<br>3. ಬ್ಲಾಕಿಂಗ್: ಸಿಂಗಲ್ ಬ್ಲಾಕ್, ಡಬಲ್ ಬ್ಲಾಕ್ | ಈ ಮೂರು ಕೌಶಲದ ಕಲಿಕೆಗೆ 5 ಹಂತಗಳನ್ನು ಪಾಲಿಸುವುದು (ನಿಲುವು ಮತ್ತು ಪ್ರವೇಶ, ನಿರ್ವಹಣೆ, ಸಂಪರ್ಕ, ಅಂತ್ಯಾನುಗತ) | ವಾಲಿಬಾಲ್, ಅಂಕಣ, ಜಾಳಿಗೆ (ನೆಟ್) ಸುಣ್ಣದ ಪುಡಿ, ಕಂಬಗಳು | ತಂತ್ರ: ವೀಕ್ಷಣಾ ವಿಧಾನ<br>ಸಾಧನ: ತಪ್ಪುಗಳನ್ನು ತಿದ್ದುವುದು.<br>(ನಮೂನೆ–2)<br>ಕೌಶಲದ ಹಂತಗಳು<br>1 \| 2 \| 3 \| 4 \| 5 \| ಒಟ್ಟು<br>✓ \| ✓ \| . \| . \| ✓ \| 3 | ನಿಗದಿತ ಅವಧಿಗಳಲ್ಲಿ ಕೌಶಲಗಳ ಕಲಿಕೆ ಮತ್ತು ಅಭ್ಯಾಸಗಳನ್ನು ಪೂರ್ಣಗೊಳಿಸುವುದು. | |